ನನ್ನ ಸಾನ್ನಿಧ್ಯದ ಅನುಭವವನ್ನು ಪಡೆದುಕೊಳ್ಳುತ್ತಾನೆ" ಎಂದು ಹೇಳುತ್ತಾರೆ.

ಒಟ್ಟಾರೆ ಭಗವಂತನ ಅನುಭವವೇ ಮಾನವ ಜೀವನದ ನಿಃಶ್ರೇಯಸ್ಸಿಗೆ ಕಾರಣ. ಅದನ್ನು ಪಡೆದುಕೊಳ್ಳಲು ಏನೇನು ಬೇಕೋ ಅದೆಲ್ಲವನ್ನೂ ಶ್ರೀಕೃಷ್ಣನು ಈ ಒಂದೇ ಶ್ಲೋಕದಲ್ಲಿ ವಿಶದ ಪಡಿಸಿದ್ದಾನೆ. ಇದಕ್ಕೆಂದೇ ಶಂಕರರು ಈ ಶ್ಲೋಕವನ್ನು 'ಗೀತೆಯ ಸಾರಸಂಗ್ರಹ' ಎಂದು ಪ್ರಶಂಸೆ ಮಾಡಿದ್ದಾರೆ.

## ಮಧುಸೂದನ ಸರಸ್ವತಿಗಳ ಸಂಬಂಧ ವಿವರಣೆ

ಪ್ರಕಾಂಡ ಅದ್ವೈತಿಗಳಾದರೂ, ಕೃಷ್ಣಭಕ್ತಿಯ ಕಡೆಗೆ ಒಲವು ತೋರಿದ ಮಹಾತ್ಮರು ಮಧುಸೂದನ ಸರಸ್ವತಿಗಳು. ಅವರು ಈ ಶ್ಲೋಕಕ್ಕೆ ನೀಡಿರುವ ವಿವರಣೆ ಅರ್ಥಗರ್ಭಿತವಾಗಿದೆ. ಪದಗಳ ನಡುವೆ ಅವರು ಅತ್ಯಂತ ಸೂಕ್ತವಾದ ಸಂಬಂಧವನ್ನು ಕಲ್ಪಿಸಿದ್ದಾರೆ. ಇದರಿಂದ ಈ ಶ್ಲೋಕದ ಅಂತರಾರ್ಥವನ್ನು ಚೆನ್ನಾಗಿ ತಿಳಿಯಲು ಸಾಧ್ಯವಾಗುತ್ತದೆ. ಅವರ ವಿವರಣೆ ಹೀಗಿದೆ:

ವೇದವಿಹಿತವಾದ ಕರ್ಮಗಳನ್ನು ಭಗವಂತನಿಗೋಸ್ಕರವಾಗಿ ಮಾಡುವವನು ಎಂಬರ್ಥದಿಂದ **ಮತ್ಕರ್ಮಕೃತ್** ಎಂಬ ಪದವನ್ನು ಉಪಯೋಗಿಸಲಾಗಿದೆ. ಇಂಥ ಕರ್ಮಗಳನ್ನು ಸಾಧಾರಣ ಜನರು ಸಹ ಸ್ವರ್ಗ ಮುಂತಾದ ಬಯಕೆಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ ಕೈಗೊಳ್ಳುತ್ತಾರೆ. ಇಂಥವರಿಗಿಂತ ಭಗವದ್ಭಕ್ತನು ವಿಶಿಷ್ಟನಾದವನು ಎಂದು ಹೇಳಲು **ಮತ್ಪರಮಃ** ಎಂಬ ಪದವನ್ನು ಹೇಳಿದೆ. ಭಕ್ತನಾದವನಿಗೆ ಭಗವತ್ಪ್ರಾಪ್ತಿಯೇ ನಿಶ್ಚಯವಾದ ಧ್ಯೇಯವಾಗಿರುತ್ತದೆ. ಅವನಿಗೆ ಸ್ವರ್ಗಾದಿ ಕಾಮನೆಗಳು ಬೇಕಾಗಿರುವುದಿಲ್ಲ. ಹಾಗೆಂದೇ ಅವನು **ಮದ್ಭಕ್ತಃ** ಅಂದರೆ ಭಗವಂತನ ಪ್ರಾಪ್ತಿಗೋಸ್ಕರವಾಗಿ ಎಲ್ಲ ಪ್ರಕಾರದಿಂದಲೂ ಭಗವಂತನ ಭಜನೆಯಲ್ಲಿಯೇ ನಿರತರಾಗಿರುತ್ತಾನೆ.

ಭಕ್ತ ಭಗವಂತನಲ್ಲಿ ಪ್ರೀತಿಯಿಟ್ಟಿರುತ್ತಾನೆ ಎಂಬುದೇನೋ ನಿಜ. ಆದರೆ ಮಕ್ಕಳು ಮೊದಲಾದವರಲ್ಲಿಯೂ ಅವನಿಗೆ ಪ್ರೀತಿಯಿರುತ್ತದೆಯಲ್ಲ ಎಂಬ ಸಂದೇಹ ಮೂಡಬಹುದು. ಅದನ್ನು ನಿವಾರಿಸುವುದಕ್ಕಾಗಿಯೇ **ಸಂಗವರ್ಜಿತಃ** ಎಂಬ ಪದವನ್ನು ಸೇರಿಸಿದ್ದಾರೆ. ಮಧುಸೂದನರು ಇದಕ್ಕೆ **ಬಾಹ್ಯವಸ್ತುಸ್ಪೃಹಾಶೂನ್ಯಃ** – ಭಗವಂತನನ್ನು ಬಿಟ್ಟು ಬೇರೆಲ್ಲ ಹೊರಗಿನ ವಸ್ತುಗಳಲ್ಲಿಯೂ ಆಸೆಯಿಲ್ಲದವನು ಎಂದು ಅರ್ಥ ಮಾಡುತ್ತಾರೆ. ಶತ್ರುಗಳಲ್ಲಿ ದ್ವೇಷಭಾವನೆ ಇದ್ದರೆ ನಿಸ್ಸಂಗವು ಹೇಗೆ ಸಾಧ್ಯವಾಗುತ್ತದೆ ಎಂಬ ಇನ್ನೊಂದು ಸಂದೇಹವೂ ಮೂಡಬಹುದು. ಏಕೆಂದರೆ 'ಸಂಗ' ಅಥವಾ 'ಆಸಕ್ತಿ'ಯು ರಾಗ ಮತ್ತು ದ್ವೇಷ – ಈ ಎರಡೂ ಪ್ರಕಾರಗಳ ರೂಪದಲ್ಲಿ ಇರುತ್ತದೆ. ಅದಕ್ಕೆಂದೇ ಶ್ರೀಕೃಷ್ಣನು **ನಿರ್ವೈರಃ ಸರ್ವಭೂತೇಷು** ಎಂಬ ಗುಣವನ್ನೂ ಹೇಳುತ್ತಾನೆ. ಯಾವ ಜೀವಿಯಲ್ಲಿಯೂ ದ್ವೇಷವನ್ನು ಮಾಡದವನು ಎಂದು ಇದರ ಅರ್ಥ. ಇಷ್ಟು ವಿವರಣೆ ಕೊಟ್ಟು, ಕಡೆಗೆ ಮಧುಸೂದನರು, "ನೀನು ಏನನ್ನು ತಿಳಿಯಲು ಇಷ್ಟಪಟ್ಟಿದ್ದೆಯೋ, ಅದನ್ನು ನಾನು ಈ ಉಪದೇಶದ ಮೂಲಕ ಬೋಧಿಸಿದ್ದೇನೆ. ಇದಕ್ಕಿಂತಲೂ ಹೆಚ್ಚಿಗೆ ಹೇಳುವುದು ಏನೂ ಉಳಿದಿಲ್ಲ" ಎನ್ನುವುದೇ ಕೃಷ್ಣನ ಮಾತಿನ ಅಭಿಪ್ರಾಯ ಎಂದು ಸ್ಪಷ್ಟಪಡಿಸುತ್ತಾರೆ.

## ಆಧುನಿಕ ಕಾಲಕ್ಕೆ ಅನ್ವಯ

ಇಂದಿನ ಕಾಲ ಬಹಳ ಸಂಕೀರ್ಣವಾದ ಕಾಲವಾಗಿದೆ. ಸುಖವಾದ ಬದುಕಿಗೆ ಬೇಕಾದ ಭೋಗಸಾಧನೆಗಳೇನೋ ಯಥೇಚ್ಛವಾಗಿ ದೊರಕುತ್ತಿವೆ. ಆದರೆ ಒಟ್ಟಾರೆ ಜೀವನವೇ ಅರ್ಥಹೀನವಾಗಿಬಿಟ್ಟಿದೆ. ಬಾಳುವೆಗೆ ಒಂದು ಉನ್ನತ ಧ್ಯೇಯವಿದೆ, ಉದ್ದೇಶವಿದೆ ಎನ್ನುವುದನ್ನು ನಮ್ಮಲ್ಲಿ ಬಹುಪಾಲು ಜನರು ಮರೆತೇಬಿಟ್ಟಿದ್ದೇವೆ. ಇಂಥ ವಿಪರ್ಯಾಸದ ಯುಗ ಇದು. ಧಾವಂತದ ಬದುಕು, ಕಳವಳಗೊಂಡ ಮನಸ್ಸು, ಬರಡಾದ ಹೃದಯ, ದುರ್ಬಲ ದೇಹ – ಇವುಗಳಿಂದ ಜನರು ತಳಮಳಗೊಂಡಿದ್ದಾರೆ. ಜೀವನದ ನೆಮ್ಮದಿ ನಷ್ಟವಾಗಿ ಬರೀ ಒತ್ತಡವೇ ಎಲ್ಲೆಡೆ ಕಾಣಿಸಿಕೊಳ್ಳುತ್ತಿದೆ. ಜನರು ಸದಾಕಾಲ ನಕಾರಾತ್ಮವಾಗಿಯೇ ಚಿಂತಿಸಲು ತೊಡಗಿದ್ದಾರೆ. ಭವಿಷ್ಯದ ಬಗ್ಗೆ ಭಯ, ಸಂದೇಹಗಳು ಸರ್ವತ್ರ ತಾಂಡವವಾಡುತ್ತಿವೆ.

ಇವೆಲ್ಲವೂ ಭಗವದ್ಭಕ್ತಿಯ ಕೊರತೆಯಿಂದಲೇ ಆಗಿರುವಂಥವು. ಬಾಳಿಗೆ ಚಿರಂತನ ಮೌಲ್ಯವಾಗಬಲ್ಲವನು ಪರಮಾತ್ಮನೊಬ್ಬನೇ. ಅವನೇ ಜೀವನದ ಆಧಾರಸ್ತಂಭವಾಗಬಲ್ಲವನು, ಎಲ್ಲ ಕಾಲಕ್ಕೂ ಸಲ್ಲುವ ನೆಲೆಯಾಗಬಲ್ಲವನು. ಆತನನ್ನು ಆಸರೆಯಾಗಿಟ್ಟುಕೊಂಡು ಬಾಳುವ ಬದುಕು ಮಾತ್ರವೇ ಪರಿಪುಷ್ಟವಾಗಿರುತ್ತದೆ, ಪರಿಪೂರ್ಣವಾಗಿರುತ್ತದೆ, ಸಾರ್ಥಕವಾಗಿರುತ್ತದೆ. ಅದಕ್ಕಾಗಿ ನಮ್ಮ ಎಲ್ಲ ಕೆಲಸಗಳನ್ನೂ 'ಭಗವಂತನ ಆರಾಧನೆ'ಯಂತೆ ಮಾಡಲು ನಾವು ಪ್ರಯತ್ನಪಡಬೇಕು **(ಮತ್ಕರ್ಮಕೃತ್)**.

ನಮ್ಮೆಲ್ಲ ಕೆಲಸಕಾರ್ಯಗಳು, ಚಿಂತನೆಗಳು – ಒಟ್ಟಿನಲ್ಲಿ ನಮ್ಮ ಇಡೀ ಜೀವನದ ಏಕಮಾತ್ರ ಗುರಿ 'ಭಗವಂತ'ನೇ ಆಗುವಂತೆ, ನಮ್ಮ ಮನಸ್ಸು, ಬುದ್ಧಿಗಳನ್ನು ತಿದ್ದಿ ತೀಡಿ ಒಪ್ಪ ಓರಣಗೊಳಿಸಿಕೊಳ್ಳಬೇಕು **(ಮತ್ಪರಮಃ)**.

ಸಾಧ್ಯವಾದಷ್ಟು ಭಗವಂತನ ಕೀರ್ತನೆ, ಭಜನೆ, ಪ್ರಾರ್ಥನೆ, ಜಪ, ಧ್ಯಾನಗಳಲ್ಲಿ ಕಾಲವನ್ನು ಕಳೆಯುತ್ತ ಭಗವಂತನಲ್ಲಿ ಭಕ್ತಿಯನ್ನು ಹೆಚ್ಚಿಸಿಕೊಳ್ಳುತ್ತ ಸಾಗಬೇಕು **(ಮದ್ಭಕ್ತಃ)**.

ಇತರ ಪ್ರಾಪಂಚಿಕ ಸಂಬಂಧಗಳಲ್ಲಿ, ಲೌಕಿಕ ವಸ್ತುಗಳಲ್ಲಿ ಆಸಕ್ತಿಯನ್ನು ಕಡಮೆ ಮಾಡಿಕೊಳ್ಳುತ್ತ ಹೋಗಬೇಕು **(ಸಂಗವರ್ಜಿತಃ)**.

ಎಲ್ಲ ಜೀವಿಗಳೂ ಪರಮಾತ್ಮನ ಅಂಶಗಳೇ ಎಂಬ ಮನೋಭಾವನೆಯನ್ನು ಬೆಳೆಸಿಕೊಂಡು, ಎಲ್ಲರ ಜೊತೆಗೆ ಆತ್ಮೀಯತೆಯನ್ನು ಬೆಳೆಸಿಕೊಳ್ಳಬೇಕು **(ನಿರ್ವೈರಃ ಸರ್ವಭೂತೇಷು)**.

ಮೇಲಿನ ಉತ್ತಮ ಗುಣಗಳು ನಮ್ಮ ಬದುಕನ್ನು ಸರ್ವಾಂಗ ಸುಂದರವನ್ನಾಗಿ ಮಾಡುತ್ತವೆ; ಆನಂದ, ನೆಮ್ಮದಿಗಳಿಂದ ನಮ್ಮ ಒಡಲನ್ನು ತುಂಬುತ್ತವೆ. ಲೌಕಿಕ ಹಾಗೂ ಆಧ್ಯಾತ್ಮಿಕತೆಗಳ ನಡುವಣ ಭ್ರಮೆಯ ಗೋಡೆ ಒಡೆದುಹೋಗಿ, ಬದುಕು ಸಮಗ್ರವಾಗುತ್ತದೆ, ಸಮನ್ವಯದೃಷ್ಟಿಯದಾಗುತ್ತದೆ, ಪವಿತ್ರವಾಗುತ್ತದೆ, ಪ್ರಫುಲ್ಲವಾಗುತ್ತದೆ. ಈ ಬೋಧನೆಯೇ ಶ್ರೀಕೃಷ್ಣನು ನಮ್ಮೆಲ್ಲರಿಗೆ – ಇಡೀ ಮಾನವ ಜನಾಂಗಕ್ಕೆ – ನೀಡುತ್ತಿರುವ ಸುಂದರ ಕೊಡುಗೆ, ಎಲ್ಲ ಕಾಲಕ್ಕೂ ಈಗಿನ ಕಾಲಕ್ಕೂ ಸಮಂಜಸವಾದ ಅನುಷ್ಠಾನ ಧರ್ಮದ ಉಡುಗೊರೆ. ಅದನ್ನು ಸ್ವೀಕರಿಸಿ ಧನ್ಯರಾಗೋಣವೇ?